# ಹಿಂದೂ ರಾಷ್ಟ್ರ : ಆಕ್ಷೇಪ ಮತ್ತು ಖಂಡನೆ

## ಮನೋಗತ

ಇತ್ತೀಚೆಗೆ ‘ಹಿಂದೂ ರಾಷ್ಟ್ರ’ ಎಂಬ ಶಬ್ದವನ್ನು ‘ಸೆಕ್ಯುಲರ್ ಭಾರತ’ದಲ್ಲಿ ಆಕ್ಷೇಪಾರ್ಹವೆಂದು ಪರಿಗಣಿಸಲಾಗುತ್ತಿದೆ. ಕೆಲವು ಜನರಂತೂ ‘ಹಿಂದೂ’ ಶಬ್ದವನ್ನೇ ಮುಖ್ಯವಾಗಿ ಆಕ್ಷೇಪಿಸುತ್ತಾರೆ. ‘ಹಿಂದೂ ರಾಷ್ಟ್ರ’ದ ಕಲ್ಪನೆಯು ಅಸಾಂವಿಧಾನಿಕವಾಗಿದೆ’ ಎಂದು ‘ಸೆಕ್ಯುಲರ್’ ವಿಚಾರವಂತರ ಆಕ್ಷೇಪವಾಗಿದೆ. ಸಾಮಾಜಿಕ ಸೌಹಾರ್ದದ ಹರಟೆ ಹೊಡೆಯುವವರಿಗೆ ‘ಹಿಂದೂ ರಾಷ್ಟ್ರ ಸಂಕುಚಿತ ಅಥವಾ ಕಟ್ಟರ್‌ಪಂಥಿ’ಎಂದೆನಿಸುತ್ತದೆ. ಅಹಿಂದೂ ಪಂಥೀಯರಿಗೆ ‘ತಮ್ಮ ಪ್ರಗತಿಯಲ್ಲಿ ‘ಹಿಂದೂ ರಾಷ್ಟ್ರ’ ಅಡ್ಡಿಯಾಗಬಹುದು’ ಎಂದು ಅನಿಸುತ್ತದೆ. ಈ ಆಕ್ಷೇಪಗಳು ಪ್ರಾತಿನಿಧಿಕವಾಗಿದ್ದರೂ, ಇಂತಹ ಅನೇಕ ಆಕ್ಷೇಪಗಳು ‘ಹಿಂದೂ ರಾಷ್ಟ್ರ’ ಶಬ್ದದ ಸುತ್ತಮುತ್ತಲೂ ಇರುತ್ತವೆ. ಈ ಆಕ್ಷೇಪಗಳ ವಾಸ್ತವಿಕತೆಯೇನು ? ಭಾರತವು ಸ್ವಯಂಭೂ ‘ಹಿಂದೂ ರಾಷ್ಟ್ರ’ವೇ ? ಮತ್ತು ‘ಹಿಂದೂ ರಾಷ್ಟ್ರ ಸ್ಥಾಪನೆಯ ಕಾರ್ಯವನ್ನು ಮಾಡುವವರ ಮೂಲಭೂತ ವಿಚಾರಗಳೇನು’ ಎಂಬ ಪ್ರಶ್ನೆಗಳ ಉತ್ತರಗಳನ್ನು ಈ ಗ್ರಂಥ ನೀಡಲಿದೆ.

ಅನಾದಿಕಾಲದಿಂದಲೂ ‘ಹಿಂದೂ ರಾಷ್ಟ್ರ’ವು ಭಾರತದ ಹೆಗ್ಗುರುತಾಗಿತ್ತು. ಇಸ್ಲಾಮಿ ಮತ್ತು ಬ್ರಿಟೀಷರ ಆಳ್ವಿಕೆಯಲ್ಲೂ ಹಿಂದೂ ರಾಜರು ಈ ಗುರುತನ್ನು ಶಾಶ್ವತವಾಗಿಟ್ಟಿದ್ದರು. ೧೯೪೭ ರ ವಿಭಜನೆಯ ನಂತರ ಸಂವಿಧಾನ ಸಭೆಯಲ್ಲಿ ಭಾರತದ ಈ ಗುರುತನ್ನು ಅಳಿಸುವ ವಿಫಲ ಪ್ರಯತ್ನವಾಯಿತು. ೧೯೭೬ ರಲ್ಲಿ ಮಾತ್ರ ಇಂದಿರಾ ಗಾಂಧಿಯವರು ಅಸಾಂವಿಧಾನಿಕ ಪದ್ಧತಿಯಿಂದ ಭಾರತೀಯ ಸಂವಿಧಾನದಲ್ಲಿ ‘ಸೆಕ್ಯುಲರ್’ ಶಬ್ದವನ್ನು ಹಾಕಿ ‘ಹಿಂದೂ ರಾಷ್ಟ್ರ’ ಎಂಬ ಭಾರತದ ಗುರುತನ್ನು ಕೊನೆಗಾಣಿಸಿದರು. ಇಂದು ಕೇವಲ ೪೨ ವರ್ಷಗಳಲ್ಲಿಯೇ ವಿದೇಶದ ‘ಸೆಕ್ಯುಲರ್’ ಶಬ್ದವು ಗೌರವಕ್ಕೆ ಪಾತ್ರವಾಗಿದ್ದರೆ, ‘ಹಿಂದೂ ರಾಷ್ಟ್ರ’ ಮಾತ್ರ ಕೀಳು ದರ್ಜೆಯದ್ದಾಗಿದೆ ಎಂದು ನಿರ್ಧರಿಸಲಾಗುತ್ತಿದೆ. ಅದಕ್ಕೂ ಮುಂದೆ ಹೋಗಿ ಸದ್ಯ ‘ಹಿಂದೂ ರಾಷ್ಟ್ರ’ ಎಂದು ಉಚ್ಚರಿಸುವುದು ಸಹ ಕಾನೂನುಬಾಹಿರ ಎಂದು ನಿರ್ಧರಿಸುವ ದುಷ್ಪ್ರಯತ್ನ ನಡೆಯುತ್ತಿದೆ. ಈ ಸ್ಥಿತಿ ಹೀಗೆಯೇ ಮುಂದುವರೆದರೆ, ಭವಿಷ್ಯದಲ್ಲಿ ಭಾರತವು ‘ಅಹಿಂದೂ ರಾಷ್ಟ್ರ’ವಾಗುವ ಅಪಾಯವಿದೆ. ಇಂತಹ ಸಮಯದಲ್ಲಿ ‘ಹಿಂದೂ ರಾಷ್ಟ್ರ’ ಎಂಬ ವಿಷಯದ ಸಂದರ್ಭದ ಆಕ್ಷೇಪಗಳನ್ನು ಖಂಡಿಸುವುದು ಆವಶ್ಯಕವಾಗಿದೆ. ಆದ್ದರಿಂದಲೇ ಈ ಗ್ರಂಥ ಉಪಯುಕ್ತವಾಗಿದೆ.

ಈ ಗ್ರಂಥವನ್ನು ಓದಿ ಹಿಂದೂ ಮತ್ತು ಅಹಿಂದೂಗಳ ಮನಸ್ಸಿನಲ್ಲಿನ ‘ಹಿಂದೂ ರಾಷ್ಟ್ರ’ ಎಂಬ ಶಬ್ದದ ಬಗೆಗಿನ ಆಕ್ಷೇಪಗಳು ದೂರವಾಗಬೇಕು ಮತ್ತು ಅವರೂ ಸಾಂವಿಧಾನಿಕ ದೃಷ್ಟಿಕೋನದಿಂದ ಭಾರತವನ್ನು ‘ಹಿಂದೂ ರಾಷ್ಟ್ರ’ವೆಂದು ಘೋಷಿಸುವ ಕಾರ್ಯದಲ್ಲಿ ಕೃತಿಶೀಲರಾಗಬೇಕು ಎಂದು ಜಗದ್ಗುರು ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

## ಅನುಕ್ರಮಣಿಕೆ


**೧. ಹಿಂದೂ ರಾಷ್ಟ್ರ : ತಾತ್ತ್ವಿಕ ವಿಷಯಗಳಿಗೆ ಸಂಬಂಧಿಸಿದ ಆಕ್ಷೇಪ ಮತ್ತು ಖಂಡನೆ ೧೧**

೧ ಅ. 'ಹಿಂದೂ' ಶಬ್ದದ ಉತ್ಪತ್ತಿಯ ಸಂದರ್ಭದಲ್ಲಿನ ಆಕ್ಷೇಪ ಮತ್ತು ಅದರ ಖಂಡನೆ ೧೧

೧ ಆ. 'ಹಿಂದೂ' ಶಬ್ದದ ವ್ಯಾಖ್ಯೆಯ ಸಂದರ್ಭದಲ್ಲಿನ ಆಕ್ಷೇಪ ಮತ್ತು ಖಂಡನೆ ೧೫

೧ ಇ. 'ರಾಷ್ಟ್ರ' ಎಂಬ ಶಬ್ದದ ಸಂದರ್ಭದಲ್ಲಿನ ಆಕ್ಷೇಪ ಮತ್ತು ಖಂಡನೆ ೧೮

೧ ಈ. 'ಹಿಂದೂ ರಾಷ್ಟ್ರ' ಎಂಬ ಸಂಕಲ್ಪನೆಯ ಬಗೆಗಿನ ಆಕ್ಷೇಪ ಮತ್ತು ಖಂಡನೆ ೨೩

**೨. ಧರ್ಮಾಧಾರಿತ ರಾಷ್ಟ್ರರಚನೆಯ ಸಂದರ್ಭದಲ್ಲಿ ಆಕ್ಷೇಪಗಳು ಮತ್ತು ಖಂಡನೆ ೨೭**

**೩. 'ಸೆಕ್ಯುಲರ್' ಶಬ್ದದ ಬಗ್ಗೆ ಆಕ್ಷೇಪ ಮತ್ತು ಖಂಡನೆ ೩೭**

**೪. ಅಲ್ಪಸಂಖ್ಯಾತರ ಓಲೈಕೆ ಮತ್ತು ಬಹುಸಂಖ್ಯಾತ ಹಿಂದೂಗಳಿಗೆ ಅನ್ಯಾಯ ಮಾಡುವ ಭಾರತದ ಪಕ್ಷಪಾತಿ 'ಸೆಕ್ಯುಲರ್'ವಾದ ! ೫೧**

**೫. ಭಾರತದ ಸಂವಿಧಾನ, ಹಿಂದೂ ಧರ್ಮ ಮತ್ತು ಹಿಂದೂ ರಾಷ್ಟ್ರದ ಅನಿವಾರ್ಯತೆ ! ೫೬**

**೬. ಹಿಂದೂ ರಾಷ್ಟ್ರ ಮತ್ತು ಆದರ್ಶ ರಾಜ್ಯವ್ಯವಸ್ಥೆಯ ದೃಷ್ಟಿಕೋನದಿಂದ ಸಂವಿಧಾನದಲ್ಲಿ ಮಾಡಬೇಕಾದ ಸುಧಾರಣೆಗಳು ೬೧**

**೭. ಭಾರತವು 'ಹಿಂದೂ ರಾಷ್ಟ್ರ' ಆಗುವ ಸಂದರ್ಭದಲ್ಲಿನ ಸಾಮಾಜಿಕ ಆಕ್ಷೇಪಗಳು ಮತ್ತು ಅವುಗಳ ಖಂಡನೆ ೬೭**

**೮. ಭಾರತವು 'ಹಿಂದೂ ರಾಷ್ಟ್ರ' ಆಗುವುದರ ಸಂದರ್ಭದಲ್ಲಿ ಆರ್ಥಿಕ ಆಕ್ಷೇಪಗಳು ಮತ್ತು ಖಂಡನೆ ೭೭**

**೯. ಭಾರತವು 'ಹಿಂದೂ ರಾಷ್ಟ್ರ'ವಾಗುವುದರ ಸಂದರ್ಭದಲ್ಲಿನ ಆಡಳಿತಾತ್ಮಕ ಆಕ್ಷೇಪ ಮತ್ತು ಖಂಡನೆ ೮೨**



### ಆಭಾರಮನ್ನಣೆ

ಈ ಗ್ರಂಥದ ಸಂಕಲನಕ್ಕಾಗಿ ಕೇಂದ್ರ ಸರಕಾರದ ಮಾಜಿ ಸಾಂಸ್ಕೃತಿಕ ಸಲಹಾಗಾರ ಪ್ರಾ. ರಾಮೇಶ್ವರ ಮಿಶ್ರಾ (ಭೋಪಾಲ್, ಮಧ್ಯಪ್ರದೇಶ) ಇವರ 'ಭಾರತ ಕಾ ಸಂವಿಧಾನ, ಭಾರತ ಕಾ ಧರ್ಮ' ಎಂಬ ಹಿಂದಿ ಭಾಷೆಯ ಗ್ರಂಥ, ಹಾಗೆಯೇ ಜ್ಯೇಷ್ಠ ಸಾವರಕರವಾದಿ ಲೇಖಕ ಡಾ. ಅರವಿಂದ ಗೋಡಬೊಲೆ (ಪುಣೆ, ಮಹಾರಾಷ್ಟ್ರ) ಇವರ 'ಹಿಂದುತ್ವ ವಿಚಾರ : ಆಕ್ಷೇಪ ಆಣಿ ವಾಸ್ತವ' ಎಂಬ ಮರಾಠಿ ಗ್ರಂಥವು ತುಂಬಾ ಉಪಯುಕ್ತವಾಯಿತು. ಇದಕ್ಕಾಗಿ ಅವರ ಬಗ್ಗೆ ಎಷ್ಟು ಕೃತಜ್ಞತೆಗಳನ್ನು ವ್ಯಕ್ತಪಡಿಸಿದರೂ ಅದು ಕಡಿಮೆಯೇ ಆಗಿದೆ.